ತಂದರೂ ಸಹಿತ ಏನು ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕ್ಯಾನ್ಸಲ್ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಆ ಕೌಜಲಗಿಯವರಿಗೆ ಮತ್ತು ಈ ಕೌಜಲಗಿಯವರಿಗೆ ಮತ್ತು ಉಮೇಸ್ ಕತ್ತಿಯವರಿಗೆ ನಾನು ಹೇಳುವುದು ಒಂದೇ ಉತ್ತರ. ಆ ಭಾಗದ ಜನರಿಗೆ ಅನ್ಯಾಯವಾಗಿದೆ ಎನ್ನತಕ್ಕಂಥ ವಿಚಾರದಲ್ಲಿ ಸರ್ಕಾರದ ಮುಂದೆ ಒತ್ತಡ ಬಂದಿರುವುದನ್ನು ನಾನು ಆಗಲೇ ಹೇಳಿದ್ದೇನೆ. ಇದನ್ನು ಶೀಘ್ರವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಶಿವಾನಂದ ಹೆಚ್ ಕೌಜಲಗಿ : ನಾನು ಮೂರು ಸಾರಿಯಿಂದ ಪ್ರಶ್ನೆ ಸಂಖ್ಯೆ 130(274)ಯನ್ನು ಕೇಳುತ್ತಿದ್ದೇನೆ. ಅದೃಷ್ಟವಶಾತ್ ಈ ಪ್ರಶ್ನೆ ಸ್ಟಾರ್ಡ್ ಪ್ರಶ್ನೆಯಾಗಿದೆ. ಇದು ಅನ್‌ಸ್ಟಾರ್ಡ್ ಪ್ರಶ್ನೆಯಾದರೆ. ಉತ್ತರ ಬರುವುದಿಲ್ಲ. ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಈ ರಸ್ತೆಯನ್ನು 1970ನೇ ಇಸವಿಯಲ್ಲಿ ಮಾಡಿದ್ದಾರೆ. ಈ ರಸ್ತೆಗೆ ಕಾರ್‌ಪೆಟಿಂಗ್ ಅಂಡ್ ರೀ-ಕಾರ್‌ಪೆಟಿಂಗ್ ಮಾಡಲಿಲ್ಲ.

ಅಧ್ಯಕ್ಷರು : ಇದು ರಸ್ತೆ ವಿಷಯಕ್ಕೆ ಸಂಬಂಧಪಟ್ಟಿರುವುದು, ಇದಕ್ಕೆ ಟೈಮ್ ಏತಕ್ಕೆ ಬೇಕು?

ಶ್ರೀ ಎಸ್. ಬಂಗಾರಪ್ಪ : ಇದು 274ನೇ ಪ್ರಶ್ನೆ ತಾನೆ?

ಶ್ರೀ ಶಿವಾನಂದ ಹೆಚ್ ಕೌಜಲಗಿ : ಹೌದು ಸಾರ್.

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಈ ಪ್ರಶ್ನೆಗೆ ಈ ಸದನ ಮುಗಿಯುವುದರೊಳಗಾಗಿ ಉತ್ತರವನ್ನು ಕೊಡಿಸುತ್ತೇನೆ.

ಸರ್ಕಾರ ಸಚಿವಾಲಯದ ಕನ್ನಡ ಬೆರಳಚ್ಚು ಹುದ್ದೆಗಳಿಗಾಗಿ ನೇಮಕಾತಿ ಆದೇಶ

1108 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವೆ?

ಅ) ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಖಾಲಿ ಇರುವ 126 ಕನ್ನಡ ಬೆರಳಚ್ಚು ಹುದ್ದೆಗಳಿಗೆ 1989ರ ಮೇ ತಿಂಗಳಲ್ಲಿ ಆಯ್ಕೆಯಾಗಿದ್ದು ಅವರುಗಳಿಗೆ ನೇಮಕಾತಿಯ ಆದೇಶವನ್ನು ಆದಷ್ಟು ಶೀಘ್ರವಾಗಿ ಹೊರಡಿಸಲಾಗುವುದೆಂದು ದಿನಾಂಕ 18-12-1990ರ ಅಧಿವೇಶನದಂದು ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ನೀಡಿರುವುದು ನಿಜವೆ;

ಆ) ಹಾಗಿದ್ದಲ್ಲಿ ಸದರಿ ಆಶ್ವಾಸನೆಯ ಮೇರೆಗೆ ಅವರುಗಳಿಗೆ ನೇಮಕಾತಿ ಆದೇಶವನ್ನು ಹೊರಡಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಆ ಆಶ್ವಾಸನೆಯನ್ನು ಈಡೇರಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಶೀಘ್ರದಲ್ಲಿ ಕ್ರಮ ತೆಗೆದುಕೊಂಡು ನೇಮಕಾತಿ ಆದೇಶ ಹೊರಡಿಸುತ್ತೇವೆಂದು ಹೇಳಿರುವುದು ನಿಜ.

ಆ) ಆದೇಶ ಹೊರಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಶೀಘ್ರದಲ್ಲಿ ಆದೇಶ ಹೊರಡಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವತ್ತು ಈ ಪ್ರಶ್ನೆಯನ್ನು ನಾನು ಮೂರನೆ ಸಾರಿ ಕೇಳುತ್ತಿರುವುದು, ತಮಗೆ ಗೊತ್ತಿರಬೇಕು. ಇದಕ್ಕೆ ಒಂದು ಬಾರಿ ಸಭಾತ್ಯಾಗವಾಯಿತು. ಧರಣಿ ಆಯಿತು. ಇದಕ್ಕೆ ಮೂರನೆಯ ಬಾರಿ ಈ ಸಭೆಯಲ್ಲಿ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಹಿಂದೆ ಮಾನ್ಯ

ಮೊಯಿಲಿಯವರು ಸಹ ಭರವಸೆಯನ್ನು ಕೊಟ್ಟಿದ್ದರು. ಇವರನ್ನು ಕೂಡಲೇ ನೇಮಕ ಮಾಡುತ್ತೇವೆಂದು ಬರರಸೆ ಕೊಟ್ಟಿದ್ದರು. ಇವತ್ತು ಅದೇ ಭರವಸೆ ಬಂದಿದೆ. ಶೀಘ್ರದಲ್ಲಿ ಆದೇಶ ಹೊರಡಿಸಲಾಗುವುದು ಎಂದು ಹೇಳಿದ್ದಾರೆ. ಇದು ಅಪ್ರಮಾಣಿಕವಾಗುತ್ತದೆ. ಸರ್ಕಾರ ಇದೇ ಸದನದಲ್ಲಿ ಮೂರು ಬಾರಿ ಭರವಸೆಯನ್ನು ಕೊಟ್ಟು ಇನ್ನೂ ಆ ಭರವಸೆಯನ್ನು ಈಡೇರಿಸದೇ ಇರುವಾಗ ಮತ್ತೆ ತಿರುಗಿ ಇವತ್ತು ಅದೇ ಭರವಸೆಯನ್ನು ಕೊಡುತ್ತಿದೆ. ಇದರ ಬಗ್ಗೆ ಸರ್ಕಾರ ದಿನಾಂಕವನನ್ನು ನಿಗಧಿ ಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ ; ಅನೇಕ ಸಾರಿ ಪ್ರಶ್ನೆ ಬಂದಿರುವುದು ನಿಜ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ವಾಗ್ದಾನ ಮಾಡಿದ್ದು ನಿಜ. ಅನೇಕಸಾರಿ ಈ ಸದನದಲ್ಲಿ ಅವರು ಸಭಾತ್ಯಾಗ ಮಾಡಿರುವುದು ನಿಜ. ಅದನ್ನು ಇಲ್ಲವೆಂದು ನಾನು ಹೇಳಿಲ್ಲ. ಅದಕ್ಕೆ ಉತ್ತರ ಕೊಟ್ಟಿರುವುದು ಅಸತ್ಯವೆಂದು ನಾನು ಹೇಳುವುದಿಲ್ಲ. ಸಬಾತ್ಯಾಗ ಮಾಡಿದ್ದು ಎಂದು ನಾವು ಹೇಳುವುದಿಲ್ಲ. ನಾನು ಎರಡನ್ನೂ ಗಮನದಲ್ಲಿಟ್ಟುಕೊಂಡು ಉತ್ತರವನ್ನು ಕೊಡುತ್ತಿದ್ದೇನೆ. ನೇರವಾದ ಪ್ರಶ್ನೆಗೆ ನೇರವಾದ ಉತ್ತರ. ನಾವು ಅದನ್ನು ಶೀಘ್ರದಲ್ಲಿ ಹೊರಡಿಸುತ್ತೇವೆ. ಶೀಘ್ರ ಎಂದ ಕೂಡಲೇ ದಿನಾಂಕ ಟೈಂ ಫಳಿಗೆ ಇವೆಲ್ಲವನ್ನು ಕೇಳುತ್ತಾರೆ. ಅದನ್ನೆಲ್ಲಾ ನೋಡಿ ನಾವು ಹೊರಡಿಸುತ್ತೇವೆ. ರಾಹುಕಾಲ ಎಲ್ಲಾ ಇರುತ್ತದೆ ಶೀಘ್ರವಾಗಿ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನೀವು ಯಮಗಂಡ ಕಾಲದಲ್ಲಿ ಇದನ್ನು ಕೊಡಿ ಎಂದು ನಾನು ಹೇಳಿಲ್ಲ. ರಾಹುಕಾಲದಲ್ಲಿ ಕೊಡಿ ಎಷ್ಟು ಬೇಗ ಮಾಡುತ್ತೀರಿ ಎಂಬುದನ್ನು ಹೇಳಿ. ಬೆಳ್ತಂಗಡಿಯಲ್ಲಿ ತಾವು ಭಾಷಣ ಮಾಡಿದ್ದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ನಾನು ಬರೇ ಮಾತಲ್ಲಿ ವಚನ ಕೊಟ್ಟ ತಕ್ಷಣ ಅದು ವೇದ ವಾಕ್ಯ ಎಂದು ಹೇಳಿದ್ದೀರಿ. ಆದರೆ ಈ ಸದನದಲ್ಲಿ ಹೇಳಿದ ಮಾತು ಇನ್ನೂ ನಡೆದಿಲ್ಲ. ಮತ್ತೆ ತಾವು ಮಾತೆತ್ತಿದರೆ ನಿಜಹೇಳಬೇಕೆಂದು ಎಂದು ಅನೇಕ ಸಲಹೇಳುತ್ತೀರಿ. ಇದನ್ನೆಲ್ಲಾ ನೋಡಿ ನಮಗೆ ಬಹಳ ಸಂತೋಷವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಈಗ ನಮ್ಮ ಪರಿಸ್ಥಿತಿ ಏನಾಗಿದೆ ಅಂದರೆ ಎಷ್ಟು ಸಾರಿ ಹೇಳಿದರೂ ಅವರಿಗೆ ಅರ್ಥವಾಗುವುದಿಲ್ಲ. ಆದ್ದರಿಂದ ನಿಜ ಹೇಳಬೇಕೆಂದರೆ ಎಂದು ಹೇಳಬೇಕಾಗುತ್ತದೆ. Nothing is piering. ನಾನೇನು ಮಾಡಲಿ ಎಷ್ಟು ಹೇಳಿದರೂ ಕೂಡ ಆಗುವುದಿಲ್ಲ ಅಂದರೆ ಏನೂ ಮಾಡಬೇಕು ಎಂದು ಗೊತ್ತಾಗುವುದಿಲ್ಲ. ಅದು ಏನೇಇರಲಿ ಅತಿ ಶೀಘ್ರದಲ್ಲಿಯೇ ಆಜ್ಞೆಯನ್ನು ಹೊರಡಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮುಂದಿನ ಪ್ರಶ್ನೆಯನ್ನು ಕರೆಯುವುದಕ್ಕೆ ಮುಂಚೆ ತಾವು ನನ್ನ ಸಹಕಾರಕ್ಕೆ ಬರಬೇಕು. ಶೀಘ್ರ ಎನ್ನತಕ್ಕ ಪದವನ್ನು ಅವರಿಂದ ಕೇಳಿ ಸಂತೋಷ ಪಡುವುದನ್ನು ಬಿಟ್ಟರೆ ಕಾರ್ಯ ಯಾವುದು ಆಗುತ್ತಿಲ್ಲ. ಆದ್ದರಿಂದ ಸನ್ಮಾನ್ಯ ಮಂತ್ರಿಗಳು ದಯಮಾಡಿ ಈ ತಿಂಗಳೊಳಗಾಗಿ ಈ ಕೆಲಸವನ್ನು ಮಾಡುವುದಕ್ಕೆ ಅವಕಾಶ ಕಲ್ಪಿಸಬೇಕು. ಏಕೆಂದರೆ ಕನ್ನಡ ಬಗ್ಗೆ ಬಹಳ ಉತ್ತೇಜನ ಕೊಡಬೇಕು ಎಂದು ಇದ್ದಾರೆ. ಕನ್ನಡ ಬೆಳವಣಿಗೆಯಾಗಬೇಕೆಂದು ಹೇಳುತ್ತಾರೆ. ಇಷ್ಟೆಲ್ಲಾ ಆದರೂ ಕೂಡ ಈ ಕನ್ನಡ ಬೆರಳಚ್ಚುಗಾರರ ನೇಮಕದ ಬಗ್ಗೆ ಇಷ್ಟು ತಡ ಏಕೆ ಆಗಿದೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕೆಂದು ನಾನು ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಅತ್ಯಂತ ಕಳಕಳಿಯಿಂದ ವಿನಯದಿಂದ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಅವರಿಗೆ ಮತ್ತೊಂದು ಸಾರಿ ಪುನರಪಿ ಎಂದು ಹೇಳುವುದಕ್ಕೆ ಇಚ್ಛೆಯಿಲ್ಲ. ಅತಿ ಶೀಘ್ರದಲ್ಲಿಯೇ ನಾವು ಆಜ್ಞೆಯನ್ನು ಹೊರಡಿಸುತ್ತೇವೆ.